**<u>ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಮತಿ ವಿ.ಜೆ. ವಕೀಲರಿಂದಃ</u>**

1) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ಪ್ರತಿವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ಪ್ರತಿವಾದ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಿಃ- 05.09.2009 ರಂದು ನಾನು ಶಿವಕುಮಾರ್ ರವರಿಂದ ಆಸ್ತಿಯನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತೇನೆ. ಆ ರೀತಿ ಖರೀದಿ ಮಾಡಿದ ಕಾಲಕ್ಕೆ ನನ್ನ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮವಾಗಿ ಉತ್ತರದ ಕಡೆ 85 ಅಡಿ ಮತ್ತು ದಕ್ಷಿಣದ ಕಡೆಗೆ 95 ಅಡಿಗಳು ಹಾಗೂ ಉತ್ತರ-ದಕ್ಷಿಣವಾಗಿ 33 ಅಡಿಗಳು ಇರುತ್ತದೆ.

2) ನನ್ನ ಸ್ವತ್ತಿನ ಉತ್ತರ ದಿಕ್ಕಿಗೆ ವಾದಿಗೆ ಸೇರಿದ ಸ್ವತ್ತು ಇರುತ್ತದೆ. ನನ್ನ ಮತ್ತು ವಾದಿಯ ಸ್ವತ್ತಿನ ನಡುವೆ 10 ಅಡಿ ಅಗಲದ ದಾರಿ ಇರುತ್ತದೆ. ವಾದಿಯ ದಾವಾ ಸ್ವತ್ತಿನ ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ನನಗೆ ಸೇರಿದ ಸ್ವತ್ತುಗಳು ಇವೆ ಎಂದರೆ ಸರಿ. ನಾನು ಆಸ್ಪತ್ರೆಯನ್ನು ಕಟ್ಟುವ ಪೂರ್ವದಲ್ಲಿ ನಗರಸಭೆಯಿಂದ ಪರವಾನಗಿಯನ್ನು ಪಡೆದಿದ್ದೆನು. ಸದರಿ ಪರವಾನಗಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಸದರಿ ಪರವಾನಗಿಯನ್ನು ಉಲ್ಲಂಘನೆ ಮಾಡಿ ಕಟ್ಟಡ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

3) ಅಸಲು ದಾವಾ ಸಂಖ್ಯೆ 213/2016 ರ ಪ್ರಕರಣದಲ್ಲಿ ನನ್ನ ಮತ್ತು ವಾದಿಯ ನಡುವೆ ಆಗಿದ್ದ ರಾಜಿಯ ಷರತ್ತುಗಳಿಗೆ ಪೂರಕವಾಗಿ ನಾನು ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ರಾಜಿಯ ಷರತ್ತುಗಳಿಗೆ ಪೂರಕವಾಗಿ ನಾನು ನಡೆದುಕೊಂಡಿಲ್ಲ ಎಂದು ವಾದಿಯು ದಿಃ-16.10.2017 ರಂದು ವಕೀಲರ ಮೂಲಕ ನೋಟೀಸನ್ನು ನೀಡಿದ್ದರು ಎಂದರೆ ಸಾಕ್ಷಿಯು ತನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ನೋಟೀಸಿಗೆ ನೀವು ಪ್ರತ್ಯುತ್ತರ ನೀಡಿಲ್ಲ ಎಂದರೆ ಸಾಕ್ಷಿಯು ತನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**